# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)**

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi

ವಿಜಯಪುರ ☎:08352-229051 www.kswu.ac.in **Fax:** 08352 -229057


ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್-99/2017-18/1249 ದಿನಾಂಕ:19-7-2016

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ:** ದಿನಾಂಕ: 12-07-2017 ರಂದು ಮುಂಜಾನೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣ, ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ: 12-07-2017 ರಂದು ಮುಂಜಾನೆ 11:00 ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

**ಅಡಕ: ನಡವಳಿಗಳು 1 ರಿಂದ 17 ಪುಟಗಳು**

**ಪ್ರತಿಗಳು:-**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಸರಕಾರದ ಪ್ರದಾನ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20-6-2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ ವಿಜ್ಞಾನ ನಿಕಾಯ. | ಸದಸ್ಯರು | 4-11-2016 | 3-11-2017 |
| 5. | 1(ಇ) | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | ಸದಸ್ಯರು | 11-04-2017 | 10-04-2020 |
| 6. | 1(ಇ) | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | ಸದಸ್ಯರು | 11-04-2017 | 10-04-2020 |
| 7. | 1(ಎಫ್) | ಶ್ರೀ ನಾನಾಗೌಡ ಹಿಪ್ಪರಗಿ | ಸದಸ್ಯರು | 02-12-2016 | 01-12-2017 |
| 8. | 1(ಎಫ್) | ಶ್ರೀಮತಿ ಬುಷಿರಾ ಬೇಗಂ | ಸದಸ್ಯರು | 02-12-2016 | 01-12-2017 |
| 9. | 1(ಎಫ್) | ಡಾ. ಬಿರಾದಾರ ಅರವಿಂದಕುಮಾರ | ಸದಸ್ಯರು | 02-12-2016 | 01-12-2017 |
| 10. | 1(ಎಫ್) | ಡಾ. ಹುಮೆರಾ ಸುಲ್ತಾನ | ಸದಸ್ಯರು | 02-12-2016 | 01-12-2017 |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19-02-2015 | 18-02-2018 |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19-02-2015 | 18-02-2018 |
| 13. | 1(ಜಿ) | ಡಾ.ಫರ್ಜಾನಾ.ಎಂ | ಸದಸ್ಯರು | 19-02-2015 | 18-02-2018 |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19-02-2015 | 18-02-2018 |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19-02-2015 | 18-02-2018 |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19-02-2015 | 18-02-2018 |
| 17. | 1(ಹೆಚ್) | ನಾಮನಿರ್ದೇಶನಾಗಿರುವುದಿಲ್ಲ | | | |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 22. | ಪ್ರಕರಣ 18(2) | ಪ್ರೊ.ವಿ.ವಿ.ಮಳಗಿ, ಕುಲಸಚಿವರು(ಮೌ) | ಸದಸ್ಯರು | 14-7-2016 | |
| 23. | ಪ್ರಕರಣ 17(2) | ಪ್ರೊ. ಕೆ.ಪಿ.ಶ್ರೀನಾಥ್, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 18-06-2016 | |

# ದಿನಾಂಕ:12-07-2017 ರಂದು ಮುಂಜಾನೆ 11:00ಗಂಟೆಗೆ, ಸಿಂಡಿಕೇಟ್ ಸಭಾಂಗಣ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳು

**ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಶ್ರೀ.ಡಿ.ಎಂ.ನಡವಣಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ | : ಸದಸ್ಯರು |
| 3. | ಪ್ರೊ. ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ-ವಿಜ್ಞಾನ ನಿಕಾಯ | : ಸದಸ್ಯರು |
| 4. | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | : ಸದಸ್ಯರು |
| 5. | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | : ಸದಸ್ಯರು |
| 6. | ಶ್ರೀ ನಾನಾಗೌಡ ಹಿಪ್ಪರಗಿ | : ಸದಸ್ಯರು |
| 7. | ಶ್ರೀಮತಿ ಬುಷಿರಾ ಬೇಗಂ | : ಸದಸ್ಯರು |
| 8. | ಡಾ.ಬಿರಾದಾರ ಅರವಿಂದಕುಮಾರ | : ಸದಸ್ಯರು |
| 9. | ಡಾ.ಹುಮೆರಾ ಸುಲ್ತಾನ | : ಸದಸ್ಯರು |
| 10. | ಡಾ.ಸತ್ಯಾನಂದ ಪಾತ್ರೋಟ | : ಸದಸ್ಯರು |
| 11. | ಡಾ.ಫರ್‌ಜಾನಾ ಎಂ | : ಸದಸ್ಯರು |
| 12. | ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ | : ಸದಸ್ಯರು |
| 13. | ಡಾ.ಸುಜಾತಾ ಜಂಗಮಶೆಟ್ಟಿ | : ಸದಸ್ಯರು |
| 14. | ಶ್ರೀ ಆರ್.ಬಿ.ಭಾವಿಕಟ್ಟಿ | : ಸದಸ್ಯರು |
| 15. | ಶ್ರೀ ಆರ್.ಸಿ.ಪಾಟೀಲ | : ಸದಸ್ಯರು |
| 16. | ಪ್ರೊ.ವಿ.ವಿ.ಮಳಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 17. | ಪ್ರೊ.ಕೆ.ಪಿ.ಶ್ರೀನಾಥ, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

**ಸಭೆಗೆ ಗೈರು ಹಾಜರಾದ ಸದಸ್ಯರು**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 3. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 4. | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 5. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | : ಸದಸ್ಯರು |

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಶ್ರೀ.ಡಿ.ಎಂ.ನಡವಣಿ,ಜಂಟಿ ನಿರ್ದೇಶಕರು, ಧಾರವಾಡ ಅವರನ್ನು ಸ್ವಾಗತಿಸಿ ಎಲ್ಲ ಸದಸ್ಯರನ್ನು ಪರಿಚಯಿಸಿದರು. ಮುಂದುವರಿದು ಸಭೆಯಲ್ಲಿರುವ ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

## ದಿನಾಂಕ:12-07-2017ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

- ದಿನಾಂಕ: 20-05-2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

**ನಿರ್ಣಯ:-**

1. **ನಡವಳಿ ಸಂಖ್ಯೆ: 05 ರಲ್ಲಿ ಡಾ. ಹನುಮಂತಯ್ಯ ಪೂಜಾರಿ, ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ಇವರ ವೇತನ ಶ್ರೇಣಿಯಲ್ಲಿ AGP ಯನ್ನು ರೂ. 6000/- ರಿಂದ 7000/-ಗಳ ಬಡ್ತಿಗೆ ಅರ್ಹರಾಗುವ ದಿ:08-02-2014 ರಿಂದ ನೀಡಲು ಅನುಮೋದಿಸಲಾಯಿತು.**
2. **ದಿನಾಂಕ:20-05-2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

- ದಿನಾಂಕ: 10-06-2017 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

**ನಿರ್ಣಯ:- ದಿನಾಂಕ:10-06-2017 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

- ದಿನಾಂಕ: 14-03-2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.

**ನಿರ್ಣಯ:-**

1. **ನಡವಳಿ ಸಂಖ್ಯೆ:- 5ರ ಕುರಿತು ಪುಸ್ತಕಗಳನ್ನು (ಡೆಮಿ1/8)ಸಿದ್ಧಪಡಿಸಿ ಮುದ್ರಿಸಲು ತೀರ್ಮಾನಿಸಲಾಯಿತು. ಅದರ ಡಿ.ಟಿ.ಪಿ ವೆಚ್ಚ ಪ್ರತಿ ಪುಟಕ್ಕೆ ರೂ.30/- ಹಾಗೂ ಕರಡು ತಿದ್ದುವ ವೆಚ್ಚ ಪ್ರತಿ ಪುಟಕ್ಕೆ ರೂ.5/-ರಂತೆ ನೀಡಲು ಅನುಮೋದಿಸಲಾಯಿತು.**
2. **ದಿನಾಂಕ: 14-03-2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಒಪ್ಪಿಕೊಳ್ಳಲಾಯಿತು.**

## ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಐಟಂ ಸಂಖ್ಯೆ: 01*

**ವಿಷಯ:** Ordinance governing Grace Marks for various examinations (UG/PG) of Akkamahadevi Women's University, Vijayapura **ಪರಿನಿಯಮಾವಳಿಗಳನ್ನು ಅನುಮೋದಿಸಿದ ಕುರಿತು.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು ಇವರ ಪತ್ರ ಸಂಖ್ಯೆ: ಜಿಎಸ್ 03 ಕೆಡಬ್ಲ್ಯುಯು 2017, ದಿನಾಂಕ:12-06-2017 ರ ಪತ್ರದನ್ವಯ Ordinance governing Grace Marks for various examinations (UG/PG) of Akkamahadevi Women's University, Vijayapura ಪರಿನಿಯಮಾವಳಿಗಳು ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆಗೊಂಡಿರುತ್ತವೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಿದೆ.

**ನಿರ್ಣಯ:- ಅವಗಾಹನಿಸಲಾಯಿತು.**

**ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 02*

ವಿಷಯ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 2016-17 ನೇ ವರ್ಷದ ಕರಡು ವಾರ್ಷಿಕ ವರದಿ ಕುರಿತು.

**ನಿರ್ಣಯ:- ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 2016-17 ನೇ ವರ್ಷದ ಕರಡು ವಾರ್ಷಿಕ ವರದಿಯನ್ನು ಅನುಮೋದಿಸಲಾಯಿತು. ಮುಂದಿನ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.**

**ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 03*

ವಿಷಯ: ಹಣಕಾಸು ಸಮಿತಿಯ ಸದಸ್ಯರೆಂದು ನಾಮನಿರ್ದೇಶನ ಮಾಡುವ ಕುರಿತು.

**ನಿರ್ಣಯ:- ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000 ಪ್ರಕರಣ 32(v)ರನ್ವಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಯ ಸದಸ್ಯರೆಂದು ಶ್ರೀ ಆರ್.ಸಿ.ಪಾಟೀಲ, ಸಿಂಡಿಕೇಟ್ ಸದಸ್ಯರು, ಕರಾಮವಿವಿ ಅವರಿಗೆ ದಿನಾಂಕ22-5-2015ರಿಂದ ಮುಂದಿನ ಆದೇಶದ ವರೆಗೆ ನಾಮನಿರ್ದೇಶನ ಮಾಡಲಾಗಿತ್ತು. ಈಗ ದಿನಾಂಕ:13-6-2017 ರ ಅಧಿಸೂಚನೆ ಅನ್ವಯ ಶ್ರೀ.ಎಂ.ಎಲ್.ಶಾಂತಗಿರಿ, ಸಿಂಡಿಕೇಟ್ ಸದಸ್ಯರು, ಅಮವಿವಿ ಅವರನ್ನು ಹಣಕಾಸು ಸಮಿತಿಯ ಸದಸ್ಯರನ್ನಾಗಿ ಮಾಡಿದ ವಿಷಯವನ್ನು ಸಿಂಡಿಕೇಟ ಸಭೆಯು ಘಟನೋತ್ತರವಾಗಿ ಅನುಮೋದಿಸಿತು.**

**ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 04*

**ವಿಷಯ:-** ಡಾ.ಸಾವಿತ್ರಿ ಸಿದ್ದಣ್ಣ, ವೈದ್ಯಾಧಿಕಾರಿ ಇವರ ಗೌರವಧನ ಹೆಚ್ಚಿಸುವ ಕುರಿತು.

**ಉಲ್ಲೇಖ:-**1 ಡಾ.ಸಾವಿತ್ರಿ ಸಿದ್ದಣ್ಣ, ವೈದ್ಯಾಧಿಕಾರಿ ಇವರ ಮನವಿ ಪತ್ರ ದಿನಾಂಕ:23-05-2017

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಸತಿ ನಿಲಯದಲ್ಲಿ ವಾಸ್ತವ್ಯವಿರುವ ವಿವಿಧ ಅಧ್ಯಯನ ವಿಭಾಗಗಳ ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಯು ಇರುವದನ್ನು ಪರಿಗಣಿಸಿ ಬಿ.ಎಚ್.ಎಮ್.ಎಸ್. ಪದವಿ ಹೊಂದಿದ ಮಹಿಳಾ ವೈದ್ಯಾಧಿಕಾರಿಗಳನ್ನಾಗಿ ಡಾ.ಸಾವಿತ್ರಿ ಸಿದ್ದಣ್ಣ ಇವರನ್ನು ದಿನಾಂಕ:16-5-2016ರಿಂದ ಅರೆಕಾಲಿಕ ವೈದ್ಯಾಧಿಕಾರಿಗಳಂತೆ ಮಾಸಿಕ ಗೌರವ ಧನ ರೂ.15,000/- ನಿಗದಿಪಡಿಸಿ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಸರಕಾರಿ ರಜೆ ದಿನಗಳಲ್ಲಿಯೂ ಕೆಲಸ ನಿರ್ವಹಿಸುತ್ತಿರುವುದರಿಂದ ಗೌರವಧನ ಹೆಚ್ಚಿಸುವ ಕುರಿತು ವಿನಂತಿಸಿದ್ದಾರೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಡಾ.ಸಾವಿತ್ರಿ ಸಿದ್ದಣ್ಣ, ವೈದ್ಯಾಧಿಕಾರಿಗಳು, ಅಮವಿವಿ ಇವರಿಗೆ ಗೌರವಧನ ರೂ.20,000/-ವನ್ನು ನೀಡಲು ತೀರ್ಮಾನಿಸಲಾಯಿತು. ಈ ತೀರ್ಮಾನವು 1-8-2017ರಿಂದ ಅನ್ವಯವಾಗುತ್ತದೆ.**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 05*

**ವಿಷಯ:–** ಶ್ರೀಮತಿ ಸಾವಿತ್ರಿ ಹಿರೇಮಠ, ಶಿಶುಪಾಲನಾ ಕೇಂದ್ರದ ಶಿಕ್ಷಕಿ ಇವರ ಗೌರವಧನ ಹೆಚ್ಚಿಸುವ ಕುರಿತು

**ಉಲ್ಲೇಖ:–** ಶ್ರೀಮತಿ ಸಾವಿತ್ರಿ ಹಿರೇಮಠ, ಶಿಶುಪಾಲನಾ ಕೇಂದ್ರದ ಶಿಕ್ಷಕಿ ಇವರ ಮನವಿ ಪತ್ರ ದಿನಾಂಕ:2–2–2017

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಶಿಶುಪಾಲನಾ ಕೇಂದ್ರದ ಶಿಕ್ಷಕಿಯಾಗಿರುವ ಶ್ರೀಮತಿ ಸಾವಿತ್ರಿ ಹಿರೇಮಠ, ಇವರು ಪ್ರಸುತ್ತ ಪಡೆಯುತ್ತಿರುವ ವೇತನ ರೂ.5,500/– ಗಳಾಗಿದ್ದು, ಸದರಿಯವರು ಜೀವನ ನಿರ್ವಹಣೆಗೆ ಕಷ್ಟವೆಂದು ತಿಳಿಸಿ ಗೌರವಧನ ಹೆಚ್ಚಿಸುವ ಕುರಿತು ವಿನಂತಿಸಿದ್ದಾರೆ. ಸದರಿ ವಿಷಯನ್ನು ಸಿಂಡಿಕೇಟ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಶ್ರೀಮತಿ ಸಾವಿತ್ರಿ ಹಿರೇಮಠ, ಶಿಶುಪಾಲನಾ ಕೇಂದ್ರದ ಶಿಕ್ಷಕಿ ಇವರಿಗೆ 2016–17ನೇ ಸಾಲಿನ ಕಾರ್ಮಿಕ ಇಲಾಖೆಯ(Balawadiworkers) SR ದರಗಳನ್ವಯ ವೇತನ ನೀಡಲು ತೀರ್ಮಾನಿಸಲಾಯಿತು. ಈ ತೀರ್ಮಾನವು 1–8–2017ರಿಂದ ಅನ್ವಯವಾಗುತ್ತದೆ.**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 06*

**ವಿಷಯ** : ಶ್ರೀ. ದೀಪಕ ಸಿಂಧೆ, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ವಿಭಾಗ ಇವರನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಮಂಡ್ಯ ಹೊರಾವರಣ ಕೇಂದ್ರಕ್ಕೆ ನಿಯೋಜಿಸಿದ ಕುರಿತು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಹೊರಾವರಣ ಕೇಂದ್ರ ಮಂಡ್ಯಕ್ಕೆ ಇಂಗ್ಲೀಷ್ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ದೀಪಕ ಸಿಂಧೆ ಇವರನ್ನು ಮಂಡ್ಯ ಹೊರಾವರಣ ಕೇಂದ್ರಕ್ಕೆ **ದಿನಾಂಕ**: 29–08–2016 ರಿಂದ ಒಂದು ವರ್ಷದ ಅವಧಿಗೆ ನಿಯೋಜಿಸಲಾಗಿದ್ದು, ಸದರಿಯವರ ಅವಧಿಯು **ದಿನಾಂಕ**:28–08–2017 ರಂದು ಮುಕ್ತಾಯವಾಗುತ್ತಲಿದ್ದು, ಕಾರಣ ನಿಯೋಜನೆ ಸೇವೆಯ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–ಶ್ರೀ. ದೀಪಕ ಸಿಂಧೆ, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ವಿಭಾಗ ಇವರಿಗೆ ಅವರ ಅವಧಿಯು ಮುಗಿದ ನಂತರ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಮಂಡ್ಯ ಹೊರಾವರಣ ಕೇಂದ್ರದಿಂದ ಮರಳಿ ಜ್ಞಾನಶಕ್ತಿ ಆವರಣಕ್ಕೆ ಕರೆದುಕೊಳ್ಳಲು ತೀರ್ಮಾನಿಲಾಯಿತು.**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 07*

**ವಿಷಯ** : ಪ್ರೊ. ವಿಜಯಶ್ರೀ ಸಬರದ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ

ಇವರನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಮಂಡ್ಯ ಹೊರಾವರಣ ಕೇಂದ್ರಕ್ಕೆ ನಿಯೋಜಿಸಿದ ಕುರಿತು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಹೊರಾವರಣ ಕೇಂದ್ರ ಮಂಡ್ಯಕ್ಕೆ ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ವಿಜಯಶ್ರೀ ಸಬರದ ಇವರನ್ನು ಮಂಡ್ಯ ಹೊರಾವರಣ ಕೇಂದ್ರಕ್ಕೆ **ದಿನಾಂಕ:** 10-8-2016 ರಿಂದ ಒಂದು ವರ್ಷದ ಅವಧಿಗೆ ನಿಯೋಜಿಸಲಾಗಿದ್ದು, ಸದರಿಯವರ ಅವಧಿಯು **ದಿನಾಂಕ:**9-8-2016 ರಂದು ಮುಕ್ತಾಯವಾಗುತ್ತಲಿದ್ದು, ಕಾರಣ ನಿಯೋಜನೆ ಸೇವೆಯ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಪ್ರೊ. ವಿಜಯಶ್ರೀ ಸಬರದ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ ಇವರನ್ನು ಇನ್ನು ಒಂದು ವರ್ಷದ ಅವಧಿಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಮಂಡ್ಯ ಹೊರಾವರಣ ಕೇಂದ್ರಕ್ಕೆ ನಿಯೋಜನೆಯನ್ನು ಮುಂದುವರೆಸಲು ತೀರ್ಮಾನಿಸಲಾಯಿತು.**

## ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ: 08*

**ವಿಷಯ** : ಆಡಳಿತ ವಿಭಾಗದಲ್ಲಿ ಓರ್ವ ಅಧೀಕ್ಷಕರನ್ನು ಸಲಹೆಗಾರನ್ನಾಗಿ ತೆಗೆದುಕೊಳ್ಳುವ ಕುರಿತು.

ವಿಶ್ವವಿದ್ಯಾನಿಲಯದಲ್ಲಿ ವಿಷಯ ನಿರ್ವಾಹಕರಿಂದ ನೇರವಾಗಿ ಉಪ-ಕುಲಸಚಿವರು/ ಕುಲಸಚಿವರಿಗೆ ಕಡತಗಳು ಮಂಡನೆಯಾಗುತ್ತಿವೆ. ಇವುಗಳ ನಡುವೆ ಅಧೀಕ್ಷಕರು, ಸಹಾಯಕ ಕುಲಸಚಿವರು ಇಲ್ಲದೆ ಇರುವುದರಿಂದ ಕಡತ ನಿರ್ವಹಣೆಯಲ್ಲಿ ತೊಂದರೆಗಳು ಆಗುತ್ತಿವೆ. ಈ ಹಿನ್ನೆಲೆಯಲ್ಲಿ ಸಿಬ್ಬಂದಿಗಳಿಗೆ ಮಾರ್ಗದರ್ಶನ ಮತ್ತು ಸಲಹೆ ನೀಡಲು ಆಡಳಿತ ವಿಭಾಗದಲ್ಲಿ ನುರಿತ ಓರ್ವ ಅಧೀಕ್ಷಕರನ್ನು ತೆಗೆದುಕೊಳ್ಳುವ ಬಗ್ಗೆ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಆಡಳಿತ ವಿಭಾಗದಲ್ಲಿ ಓರ್ವ ಅಧೀಕ್ಷಕರನ್ನು ಗೌರವಧನದ ಆಧಾರದ ಮೇಲೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.**

## ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ: 09*

**ವಿಷಯ** : PWG-34 ನೌಕರರ ವೇತನವನ್ನು ಕಾರ್ಮಿಕ ಕಾಯಿದೆ ಪ್ರಕಾರ ಹೆಚ್ಚಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:9-7-2013ರ ಸಿಂಡಿಕೇಟ್ ನಿರ್ಣಯದನ್ವಯ ವಿವಿಧ ಅಧ್ಯಯನ ವಿಭಾಗ, ವಸತಿ ನಿಲಯ, ಕಛೇರಿಗಳಲ್ಲಿ PWG Form 34 ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಾದ ಕ್ಲಾರ್ಕ್‌ಗಳಿಗೆ ಕಾರ್ಮಿಕ ಇಲಾಖೆ ಹಾಗೂ ಕ್ಲಾಸ್4th, ಅಡುಗೆ ಸಹಾಯಕರು, ಮಾಲಿ, ಅಕ್ಷರಸ್ಥ ಸಹಾಯಕರು, ಪದವೀಧರ ಸಹಾಯಕರಿಗೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ, ಇಲಾಖೆ, ಬೆಳಗಾವ ವೃತ್ತ ಬೆಳಗಾವಿ ಹೊರಡಿಸಿರುವ ಎಸ್.ಆರ್. ದರದನ್ವಯ ವೇತನವನ್ನು ಪಾವತಿಸಲಾಗುತಿತ್ತು. ಇದು ಕೇವಲ ಆ ಇಲಾಖೆಯ ದಿನಗೂಲಿ ನೌಕರರಿಗೆ ಮಾತ್ರ ಅನ್ವಯವಾಗುತ್ತದೆ. ಉಳಿದ ಎಲ್ಲ ನೌಕರರು ಕಾರ್ಮಿಕ ಇಲಾಖೆ ಹೊರಡಿಸಿರುವ ದಿನಗೂಲಿ ದರಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಈಗ ಎಲ್ಲ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆ

ನಿಗದಿಪಡಿಸುವ ದರಗಳನ್ವಯ ಸಂಭಾವನೆಯನ್ನು ಪಾವತಿಸಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:–*** **PWG Form 34 ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಾದ ಕ್ಲಾರ್ಕ್, ವಾಹನ ಚಾಲಕರು, ಪ್ಲಂಬರ್, ಕ್ಲಾಸ್4th, ಅಡುಗೆ ಸಹಾಯಕರು, ಮಾಲಿ, ಅಕ್ಷರಸ್ಥ ಸಹಾಯಕರು, ಪದವೀಧರ ಸಹಾಯಕರಿಗೆ 2016–17ನೇ ಸಾಲಿನ ಕಾರ್ಮಿಕ ಇಲಾಖೆ ನಿಗದಿಪಡಿಸಿರುವ ದರಗಳನ್ವಯ ಸಂಭಾವನೆಯನ್ನು ಪಾವತಿಸಲು ತೀರ್ಮಾನಿಸಲಾಯಿತು.**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 10*

**ವಿಷಯ** : ಇಂಜಿನಿಯರಿಂಗ್ ವಿಭಾಗದಲ್ಲಿ ಓರ್ವ ಇಲೆಕ್ಟ್ರಿಕಲ್ ಜೂನಿಯರ್ ಇಂಜಿನಿಯರ್ ಇಬ್ಬರು ಟೆಕ್ನಿಷಿಯನ್ಸ್‌ಗಳು ಮತ್ತು ಒಬ್ಬ ಲೈನ್‌ಮನ್, ಇವರ ನೇಮಕ ಮಾಡುವ ಬಗ್ಗೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ತಾಂತ್ರಿಕ ವಿಭಾಗದಲ್ಲಿ ಓರ್ವ ಇಲೆಕ್ಟ್ರಿಕಲ್ ಜೂನಿಯರ್ ಇಂಜಿನಿಯರ್, ಇಬ್ಬರು ಟೆಕ್ನಿಷಿಯನ್ಸ್‌ಗಳು ಮತ್ತು ಒಬ್ಬ ಲೈನ್‌ಮನ್, ಇವರ ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಇಂಜಿನಿಯರಿಂಗ್ ವಿಭಾಗದಲ್ಲಿ ಓರ್ವ ಇಲೆಕ್ಟ್ರಿಕಲ್ ಜೂನಿಯರ್ ಇಂಜಿನಿಯರ್, ಇಬ್ಬರು ಟೆಕ್ನಿಷಿಯನ್ಸ್‌ಗಳು ಮತ್ತು ಒಬ್ಬ ಲೈನ್‌ಮನ್ ಇವರುಗಳನ್ನು ನೇಮಕ ಮಾಡಿಕೊಳ್ಳಲು ಅನುಮೋದಿಸಲಾಯಿತು. (ಕಾರ್ಮಿಕ ಇಲಾಖೆ ನಿಗದಿಪಡಿಸುವ ದರಗಳನ್ವಯ)**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 11*

**ವಿಷಯ:–** ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರದ ಹಿಂದಿ ಅಧ್ಯಯನ ವಿಭಾಗದಲ್ಲಿ 371(ಜೆ)ಅನ್ವಯ ಪ್ರಾಧ್ಯಾಪಕರನ್ನು ನೇಮಕ ಮಾಡಿಕೊಳ್ಳಲು ಹಾಗೂ ಬಿಒಎ ಸದಸ್ಯ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಹಿಂದಿ ಅಧ್ಯಯನ ವಿಭಾಗದಲ್ಲಿ 371(ಜೆ)ಅನ್ವಯ ಪ್ರಾಧ್ಯಾಪಕರನ್ನು ನೇಮಕ ಮಾಡಿಕೊಳ್ಳಲು ತಯಾರಿಸಿದ ವಿಷಯ ತಜ್ಞರ ಪಟ್ಟಿಯನ್ನು ಅನುಮೋದಿಸಲಾಯಿತು.**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 12*

ದಿನಾಂಕ: 14/03/2017 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ ಸ್ನಾತಕ, ಸ್ನಾತಕೋತ್ತರ ಆಂತರಿಕ Internal ಹಾಗೂ ಬಾಹ್ಯ External ಪರೀಕ್ಷಾ ಮೇಲ್ವಿಚಾರಕರಿಗೆ ಪ್ರಸ್ತುತ ಸಂಭಾವಣೆ ಹಾಗೂ ಪರಿಷ್ಕೃತ ಸಂಭಾವನೆಯನ್ನು ನಿಗದಿಗೊಳಿಸಿ ಅನುಮೋದನೆ ಪಡೆಯಲಾಗಿತ್ತು. ಅದರಂತೆ

ದಿನಾಂಕ : 28/04/2017 ರಂದು ಆದೇಶವನ್ನು ಹೊರಡಿಸಲಾಗಿತ್ತು. ಕ್ರಮ ಸಂಖ್ಯೆ 01 ಹಾಗೂ 03 UGC ಹಾಗೂ Non UGC ಹಿರಿಯ ಪರೀಕ್ಷಾ ಮೇಲ್ವಿಚಾರಕರ ಮುಂದೆ ಆಂತರಿಕ ಹಿರಿಯ ಮೇಲ್ವಿಚಾರಕರು (ಸ್ಥಳೀಯ) ಎಂದು ನಮೂದಿಸಲಾಗಿತ್ತು. ಈ ಪದವನ್ನು ಹಿಂಪಡೆದು ಆಂತರಿಕ ಹಿರಿಯ ಮೇಲ್ವಿಚಾರಕರ ಬದಲಾಗಿ ಸ್ಥಳೀಯ ಕಾಲೇಜಿನಿಂದ ಸ್ಥಳೀಯ ಬೇರೆ ಕಾಲೇಜುಗಳಿಗೆ ಎಂಬ ಪದಕ್ಕೆ ತಿದ್ದುಪಡಿಗಾಗಿ ಸದರಿ ಆದೇಶವು ಮೇ, ಜೂನ 2017 ರಿಂದ ಹಾಗೂ ಮುಂದಿನ ಆದೇಶದವರೆಗೆ ಅನ್ವಯಿಸುವಂತೆ ಗೌ, ಕುಲಪತಿಗಳ ಅನುಮೋದನೆಯನ್ನು ದಿನಾಂಕ : 22/06/2017 ರಂದು ಪಡೆಯಲಾಗಿದೆ. ಈ ವಿಷಯವನ್ನು ಸಿಂಡಿಕೇಟ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಸಲ್ಲಿಸಿದೆ.

**ಹಿಂದಿನ ಕಛೇರಿ ಆದೇಶ**

| | | | | |
|---|---|---|---|---|
| 01 | UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರಿಗೆ | ಆಂತರಿಕ ಹಿರಿಯ ಮೇಲ್ವಿಚಾರಕರು (ಸ್ಥಳಿಯ) Internal Sr Supervisor | **ಪ್ರಸ್ತುತ ದಿನ ಭತ್ಯೆ** | **ಪರಿಷ್ಕೃತ ದಿನ ಭತ್ಯೆ** |
| | | | ರೂ. 350/– | ರೂ. 400/– |
| 02 | UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರಿಗೆ | ಬಾಹ್ಯ ಹಿರಿಯ ಮೇಲ್ವಿಚಾರಕರು (ಸ್ಥಳಿಯ) Internal Sr Supervisor | ರೂ. 450/– | ರೂ. 500/– |
| 03 | NON UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರಿಗೆ | ಆಂತರಿಕ ಹಿರಿಯ ಮೇಲ್ವಿಚಾರಕರು (ಸ್ಥಳಿಯ) Internal Sr Supervisor | ರೂ. 400/– | ರೂ. 500/– |
| 04 | NON UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರಿಗೆ | ಬಾಹ್ಯ ಹಿರಿಯ ಮೇಲ್ವಿಚಾರಕರು (ಸ್ಥಳಿಯ) Internal Sr Supervisor | ರೂ. 500/– | ರೂ. 600/– |

**ಸದರಿ ಆದೇಶವು ಮೇ, ಜೂನ 2017 ರಿಂದ ಹಾಗೂ ಮುಂದಿನ ಆದೇಶದವರೆಗೆ ಅನ್ವಯಿಸುತ್ತದೆ. ಈಗಿನ ಪರಿಷ್ಕೃತ ಕಛೇರಿ ಆದೇಶ**

| | | | | |
|---|---|---|---|---|
| 01 | UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರಿಗೆ | ಸ್ಥಳೀಯ ಕಾಲೇಜಿನಿಂದ ಸ್ಥಳಿಯ ಬೇರೆ ಕಾಲೇಜಿಗೆ | ಪ್ರಸ್ತುತ ದಿನ ಭತ್ಯೆ | ಪರಿಷ್ಕೃತ ದಿನ ಭತ್ಯೆ |
| | | | ರೂ. 350/– | ರೂ. 400/– |
| 02 | UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರಿಗೆ | ಬಾಹ್ಯ External | ರೂ. 450/– | ರೂ. 500/– |
| 03 | NON UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರಿಗೆ | ಸ್ಥಳೀಯ ಕಾಲೇಜಿನಿಂದ ಸ್ಥಳಿಯ ಬೇರೆ ಕಾಲೇಜಿಗೆ | ರೂ. 400/– | ರೂ. 500/– |
| 04 | NON UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರಿಗೆ | ಬಾಹ್ಯ External | ರೂ. 500/– | ರೂ. 600/– |

ಪ್ರಾಯೋಗಿಕ ಪರೀಕ್ಷಕರಿಗೆ PG, UG, B.Ed, BP.Ed

| | | | | |
|---|---|---|---|---|
| 01 | ಪ್ರಾಯೋಗಿಕ ಪರೀಕ್ಷಕರಿಗೆ | ಸ್ಥಳೀಯ ಸ್ಥಳಗಳಲ್ಲಿ | **ಪ್ರಸ್ತುತ ದಿನ ಭತ್ಯೆ** | **ಪರಿಷ್ಕೃತ ದಿನ ಭತ್ಯೆ** |
| | | | **ರೂ. 400/–** | **ರೂ. 500/–** |
| 02 | ಪ್ರಾಯೋಗಿಕ ಪರೀಕ್ಷಕರಿಗೆ | **ಬಾಹ್ಯ** External | ರೂ. 700/– | ರೂ. 1,000/– |

1) ಮೂರು ಘಂಟೆ ಅವಧಿಯ ಕನಿಷ್ಠ 09 ಅಥವಾ ಅದಕ್ಕಿಂತ ಕಡಿಮೆ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದರೆ ಕನಿಷ್ಠ ರೂ.100/–ಗಳ ಸಂಭಾವನೆಯನ್ನು ನೀಡಲಾಗುವುದು.
2) ಮೂರು ಘಂಟೆಗಳ ಅವಧಿಗಿಂತ ಕಡಿಮೆ ಇರುವ ಕನಿಷ್ಠ 20 ಉತ್ತರ ಪತ್ರಿಕೆಗಳಿಗೆ ಅಥವಾ ಅದಕ್ಕಿಂತ ಕಡಿಮೆ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದರೆ ಕನಿಷ್ಠ ರೂ.100/–ಗಳ ಸಂಭಾವನೆಯನ್ನು ನೀಡಲಾಗುವುದು.

**ನಿರ್ಣಯ:– ಅನುಮೋದಿಸಲಾಯಿತು.**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 13*

**ವಿಷಯ:–** M/s Leopard Detective and Security Services ಅವರ ಭದ್ರತಾ ಸಿಬ್ಬಂದಿಗಳನ್ನು ವಿಶ್ವವಿದ್ಯಾನಿಲಯದ ಭದ್ರತಾ ಸೇವೆಗೆ ಪಡೆದಿರುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, M/s Leopard Detective and Security Services ಅವರು ಸಲ್ಲಿಸಿದ ಇ–ಟೆಂಡರ್‌ನ ಎಲ್ಲ ದಾಖಲೆಗಳು ವಿಶ್ವವಿದ್ಯಾಲಯದ ನಿಯಮಾನುಸಾರ ಸರಿ ಇದ್ದು ಕಾರಣ ಇವರಿಗೆ ವಿಶ್ವವಿದ್ಯಾನಿಲಯ ಚರ ಮತ್ತು ಸ್ಥಿರ ಆಸ್ತಿಗಳ ಭದ್ರತೆಗಾಗಿ 45ಜನ ಸಿಬ್ಬಂದಿಗಳನ್ನು ಹಾಗೂ ವಿಶ್ವವಿದ್ಯಾಲಯದ ಶೌಚಾಲಯ ಸ್ವಚ್ಛತೆಗಾಗಿ 10ಜನ ಸ್ವಚ್ಛತಾ ಕೆಲಸಗಾರರಿಗೆ ಈ 30–6–2018ರ ಅವಧಿಗೆ ಒದಗಿಸಲು ಆದೇಶಿಸಿದೆ. ಭದ್ರತಾ ಸಿಬ್ಬಂದಿಗಳಿಗೆ ಹಾಗೂ ಭದ್ರತಾ ಕೆಲಸಗಾರರಿಗೆ ಈ ಪಟ್ಟಿಯಲ್ಲಿ ತೋರಿಸಿದ Zone–2 ವೇತನದಂತೆ ಪಾವತಿಸಲು ಹಾಗೂ ಎಲ್ಲ ಭದ್ರತಾ ಸಿಬ್ಬಂದಿಯವರು ವಿಶ್ವವಿದ್ಯಾಲಯದ ನಿಯಮಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯದ ಘನತೆಗೆ ಚ್ಯುತಿ ಬರದಂತೆ ನಡೆದುಕೊಳ್ಳಲು ತಿಳಿಸಿದೆ. ಸದರಿ ಭದ್ರತಾ ಸಿಬ್ಬಂದಿಗಳ ಸೇವೆ ವರ್ಷಕ್ಕೆ ಅಂದಾಜು 80,00,000/– ಗಳ ವೆಚ್ಚವಾಗುವುದು. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಅನುಮೋದಿಸಲಾಯಿತು.**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 14*

**ವಿಷಯ:–** ದಿನಾಂಕ: 29–06–2017 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಸುದೀರ್ಘವಾಗಿ ಚರ್ಚಿಸಿ ದಿನಾಂಕ: 29–06–2017 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 15*

**ವಿಷಯ:–** ದಿನಾಂಕ: 20–06–2017 ರಂದು ಜರುಗಿದ ಪ.ಜಾ/ಪ.ಪಂ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಸುದೀರ್ಘವಾಗಿ ಚರ್ಚಿಸಿ ದಿನಾಂಕ: 20–06–2017 ರಂದು ಜರುಗಿದ ಪ.ಜಾ/ಪ.ಪಂ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**

## ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ : 16*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಸುಜಾತಾ ಎಸ್ ಜಂಗಮಶೆಟ್ಟಿ ಅವರು ಈ ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.**

1. ವಿಶ್ವವಿದ್ಯಾಲಯದ ತಾತ್ಕಾಲಿಕ ಸಂಚಿತ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಮಂಜುಳಾ ಪಾಟೀಲರವರನ್ನು ದ್ವಿ.ದ.ಸ ನೌಕರಳೆಂದು ಪರಿಗಣಿಸುವ ಕುರಿತು

   **ನಿರ್ಣಯ:– ಈ ವಿಷಯ ಕುರಿತು ಮುಂದಿನ ದಿನಗಳಲ್ಲಿ ಕ್ರಮಕೈಗೊಳ್ಳಲು, ಒಂದು ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.**

2. ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪ್ರಸಾರಾಂಗದ ಅಡಿಯಲ್ಲಿ ಸಾವಿತ್ರಿಬಾಯಿ ಪುಲೆ ಅವರ ಜನ್ಮ ದಿನದಂದು ಮಹಿಳಾ ಸಾಧಕಿಯರಿಗೆ ಪ್ರಶಸ್ತಿ ನೀಡುವ ಕುರಿತು.

   **ನಿರ್ಣಯ:– ಈ ವಿಷಯ ಕುರಿತಂತೆ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿಸಲು ಸಿಂಡಿಕೇಟ್ ಸದಸ್ಯರಾದ ಮಾನ್ಯ ಸುಜಾತಾ ಎಸ್ ಜಂಗಮಶೆಟ್ಟಿ ಅವರಿಗೆ ಸೂಚಿಸಲಾಯಿತು.**

3. ಮುಂಬರುವ ಘಟಿಕೋತ್ಸವನ್ನು ಇದೇ ಡಿಸೆಂಬರನಲ್ಲಿ ನಡೆಯುವಂತೆ ಕ್ರಮ ಜರುಗಿಸುವ ಕುರಿತು

   **ನಿರ್ಣಯ:– ವಿಶ್ವವಿದ್ಯಾಲಯದ ಮುಂದಿನ ಘಟಿಕೋತ್ಸವನ್ನು ಜನೇವರಿ –2018ರಲ್ಲಿ ಜರುಗಿಸಲು ತೀರ್ಮಾನಿಸಲಾಯಿತು.**

## ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ : 17*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಸಿ.ಪಾಟೀಲ ಅವರು ಈ ಕೆಳಕಂಡ ಪ್ರಸ್ತಾವನೆ ಸಲ್ಲಿಸಿರುತ್ತಾರೆ.**

ವಿಷಯ: ಸಿಂಧನೂರು ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಹಾಗೂ ಅರ್ಥಶಾಸ್ತ್ರ ವಿಭಾಗಗಳನ್ನು ಪ್ರಾರಂಭಿಸುವ ಕುರಿತು.

**ನಿರ್ಣಯ:– ಸಿಂಧನೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ಈಗಾಗಲೇ ನಾಲ್ಕು ವಿಭಾಗಗಳು (M.Com, Computer Science, Mathematics, English) ಪ್ರಾರಂಭವಾಗಿದ್ದು ವಿದ್ಯಾರ್ಥಿಗಳ ಕೋರಿಕೆಯ ಮೇರೆಗೆ ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಹೆಚ್ಚುವರಿ ವಿಭಾಗಗಳನ್ನು ಪ್ರಾಂಭಿಸಲು ಸ್ಥಳಾವಕಾಶವಿದ್ದು, ಇನ್ನು ಎರಡು ಕನ್ನಡ ಹಾಗೂ ಅರ್ಥಶಾಸ್ತ್ರ ವಿಭಾಗಗಳನ್ನು ಪ್ರಾರಂಭಿಸಲು ಸಭೆಯಲ್ಲಿ ಏಕಮತದಿಂದ ಅನುಮೋದಿಸಲಾಯಿತು.**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ : 18*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಬಿ.ಭಾವಿಕಟ್ಟಿ ಅವರು ಈ ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.**

1. ದಿನಾಂಕ:29–2–2012ರಂದು ನಿವೃತ್ತಿಯಾದ ಪ್ರಾಧ್ಯಾಪಕ ಆರ್.ಎಸ್.ಎಲಿಯವರ 16 ತಿಂಗಳ ವೇತನ ಹಾಗೂ ನಿವೃತ್ತಿ ನಂತರದ ಇತರೆ ಸೌಲಭ್ಯಗಳ ಬಿಡುಗಡೆ ಕುರಿತು.

**ನಿರ್ಣಯ:– ಮುಂದೂಡಲಾಯಿತು.**

2. Examination Logistics Company ಜೊತೆ ಮಾಡಿಕೊಂಡ ಒಪ್ಪಂದ ಜೂನ್ ತಿಂಗಳಲ್ಲಿ ಕೊನೆಗೊಂಡಿರುತ್ತದೆ. ಈ ವಿಷಯ ಕುರಿತು ಯಾವ ಕ್ರಮ ತೆಗೆದುಕೊಂಡಿದ್ದೀರಿ ಎಂಬುದರ ಬಗ್ಗೆ ವಿವರಣೆ ಕೊಡಿ.

**ನಿರ್ಣಯ:– ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಮಾನ್ಯ ಕುಲಸಚಿವರು(ಮೌ) ಇವರಿಗೆ ಸೂಚಿಸಲಾಯಿತು.**

**ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 01*

***ವಿಷಯ: 2017–18 ನೇ ಶೈಕ್ಷಣಿಕ ಸಾಲಿಗಾಗಿ Bachelor of Fashion Technology, Diploma in Fashion Technology, Master of Fashion Technology & PG Diplomaಕೋರ್ಸುಗಳಿಗೆ ಹೊಸ ಮಹಿಳಾ ಕಾಲೇಜುಗಳ ಸಂಲಗ್ನತೆ ಕುರಿತು.***

***ಉಲ್ಲೇಖ:1. KALANIKETHAN COLLEGEG OF FASHION DESIGNING, DAVANGERE, DATE:01-07-2017.***
***2. GVR EDUCATION SOCIETY BANGALORE, DATE:01-07-2017.***

(ಅ) ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ ಇದರ ವ್ಯಾಪ್ತಿಗೆ ದಾವಣಗೆರೆ ಮತ್ತು ಬೆಂಗಳೂರು ಜಿಲ್ಲೆಯಿಂದ ಶೈಕ್ಷಣಿಕ 2017–18 ನೇ ಸಾಲಿಗೆ ಉಲ್ಲೇಖಿತ 1 ಮತ್ತು 2 ರನ್ವಯ Bachelor of Fashion Technology, Diploma in Fashion Technology, Master of Fashion Technology & PG Diploma ಕೋರ್ಸುಗಳಿಗೆ ಹೊಸ ಸಂಲಗ್ನತೆಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ ಕಾರಣ 2017–18 ನೇ ಶೈಕ್ಷಣಿಕ ಸಾಲಿಗೆ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಿಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವ್ಯಾಪಿಸಿರುವುದರಿಂದ ಸದರಿ ಎರಡು ಕಾಲೇಜುಗಳಿಗೆ ಹೊಸ ಸಂಲಗ್ನತೆ ಸಂಯೋಜನೆ ನೀಡಲು ಸಿಂಡಿಕೇಟ ಸಭೆಯ ಅವಗಾಹನೆಗೆ ತರಲಾಗಿದೆ, ಹಾಗೂ ಇದು ಒಪ್ಪಿದಲ್ಲಿ ಸದರಿ ಎರಡು ಕಾಲೇಜುಗಳಿಗೆ ಸಂಬಂಧ ಪಟ್ಟ ವಿಷಯ ತಜ್ಞರ ಸಮಿತಿಯನ್ನೊಳಗೊಂಡ ಸ್ಥಳೀಯ ಸ್ಥಾನಿಕ ವಿಚಾರಣಾ ಸಮಿತಿ ರಚಿಸಲು ಅನುಮತಿಗಾಗಿ ಮಂಡಿಸಿದೆ.

**ನಿರ್ಣಯ:– ಸ್ಥಾನಿಕ ವಿಚಾರಣಾ ಸಮಿತಿ ರಚಿಸಲು ಅನುಮೋದಿಸಲಾಯಿತು.**

(ಆ) ಈಗಾಗಲೇ 2017-18 ನೇ ಸಾಲಿಗೆ ಒಟ್ಟು 11 ಹೊಸ ಮಹಿಳಾ ಕಾಲೇಜುಗಳು ಹಾಗೂ ಹೊಸ ಕೋರ್ಸು, ಹೊಸ ವಿಷಯಗಳಿಗೆ ಸರ್ಕಾರದಿಂದ ಅನುಮತಿ ನೀಡಲಾಗಿದ್ದು ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಮಂಡಿಸಿದೆ.

**ನಿರ್ಣಯ:- ಅವಗಾಹನಿಸಲಾಯಿತು.**

**ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

# *ಸಿಂಡಿಕೇಟ್ ಪುರವಣಿ ಸಂಖ್ಯೆ : 02*

**ವಿಷಯ** : ಶ್ರೀಮತಿ ಅನಿತಾ ಕಾಳೆ, ಮಹಿಳಾ ನರ್ಸ ಇವರ ಗೌರವಧನ ಹೆಚ್ಚಿಸುವ ಕುರಿತು.

**ಉಲ್ಲೇಖ:** ಶ್ರೀಮತಿ ಅನಿತಾ ಕಾಳೆ, ಮಹಿಳಾ ನರ್ಸ ಇವರ ಮನವಿ ಪತ್ರ ದಿನಾಂಕ: 14-06-2017

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ, ಆರೋಗ್ಯ ಕೇಂದ್ರದಲ್ಲಿ ಮಹಿಳಾ ನರ್ಸ ಎಂದು ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಅನಿತಾ ಕಾಳೆ ಇವರಿಗೆ ಗೌರವಧನ ರೂ 9500/-ಗಳನ್ನು ಪಾವತಿಸಲಾಗುತ್ತಿದ್ದು, ಸದರಿ ವೇತನ ನಮ್ಮ ಕೆಲಸಕ್ಕೆ ಅನುಗುಣವಾಗಿ ಸಿಗುತ್ತಿಲ್ಲ ಎಂದು ಗೌರವಧನ ಹೆಚ್ಚಿಸಲು ಕುರಿತು ವಿನಂತಿಸಿದ್ದಾರೆ. ಸದರಿ ವಿಷಯವನ್ನು ಸಿಂಡಿಕೇಟ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ:-ಶ್ರೀಮತಿ ಅನಿತಾ ಕಾಳೆ, ಮಹಿಳಾ ನರ್ಸ, ಅಮವಿವಿ ಇವರಿಗೆ ಗೌರವಧನ ರೂ.12,000/- ನೀಡಲು ಅನುಮೋದಿಸಲಾಯಿತು. ಈ ತೀರ್ಮಾನವು ದಿನಾಂಕ 1-8-2017 ರಿಂದ ಅನ್ವಯಿಸುತ್ತದೆ.**

**ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

# *ಸಿಂಡಿಕೇಟ್ ಪುರವಣಿ ಸಂಖ್ಯೆ : 03*

**ವಿಷಯ** : ಪ್ರೊ. ವಿಜಯಾ ಎಸ್.ಎಸ್ ನಿವೃತ್ತ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ ಇವರನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಉಡುತಡಿ ಕೇಂದ್ರಕ್ಕೆ ವಿಶೇಷಾಧಿಕಾರಿಗಳನ್ನಾಗಿ ನಿಯೋಜಿಸಿದ ಕುರಿತು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಉಡುತಡಿ ಕೇಂದ್ರಕ್ಕೆ ಕನ್ನಡ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ವಿಜಯಾ ಎಸ್.ಎಸ್ ಇವರನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಉಡುತಡಿ ಅಧ್ಯಯನ ಕೇಂದ್ರಕ್ಕೆ **ದಿನಾಂಕ**: 12-08-2016 ರಂದು ಗೌರವಧನ ಆಧಾರದ ಮೇಲೆ ನೇಮಕ ಮಾಡಲಾಗಿತ್ತು. ಆದರೆ ಸದರಿಯವರನ್ನು ಯುಜಿಸಿ ಯವರು ಎಮರಿಟಸ್ ಫೆಲೋಶಿಫ್ ಎಂದು ದಿನಾಂಕ:07-04-2017 ರಂದು ಪತ್ರ ಕಳುಹಿಸಿರುತ್ತಾರೆ. ಆದ್ದರಿಂದ ಸದರಿ ಅಧ್ಯಯನ ಕೇಂದ್ರಕ್ಕೆ ವಿಶೇಷಾಧಿಕಾರಿಗಳನ್ನಾಗಿ ಮುಂದುವರೆಸುವ ಕುರಿತು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-ಪ್ರೊ. ವಿಜಯಾ ಎಸ್.ಎಸ್ ಅವರು ಎಮಿರೆಟಿಸ್ ಪ್ರೊಫೆಸರ್ ಆಗಿ ಸೇರಿಕೊಂಡಿರುವುದರಿಂದ ಉಡುತಡಿ ಸಂಶೋಧನಾ, ಕೌಶಲ್ಯ ಅಭಿವೃದ್ಧಿ ಮತ್ತು ವಿಸ್ತರಣಾ ಕೇಂದ್ರಕ್ಕೆ ಇನ್ನೊಬ್ಬರನ್ನು ವಿಶೇಷ ಅಧಿಕಾರಿಯಾಗಿ ನೇಮಕ ಮಾಡಲು ಒಪ್ಪಲಾಯಿತು. ಇನ್ನೊಬ್ಬರ ನೇಮಕಾತಿ ಆಗುವವರೆಗೆ ಪ್ರೊ. ವಿಜಯಾ ಎಸ್.ಎಸ್ ಇವರಿಗೆ ಅಕ್ಕಮಹಾದೇವಿ**

**ಮಹಿಳಾ ವಿಶ್ವವಿದ್ಯಾನಿಲಯದ ಉಡುತಡಿ ಸಂಶೋಧನಾ, ಕೌಶಲ್ಯ ಅಭಿವೃದ್ಧಿ ಮತ್ತು ವಿಸ್ತರಣಾ ಕೇಂದ್ರದ ವಿಶೇಷಾಧಿಕಾರಿಗಳ ಕರ್ತವ್ಯಗಳನ್ನು ನಿರ್ವಹಿಸಲು ಒಪ್ಪಲಾಯಿತು.**

**ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 04*

**ವಿಷಯ** : ಪಿಎಚ್.ಡಿ ಮಹಾಪ್ರಬಂಧ ಮಂಡನೆಯ ಶುಲ್ಕ ಹೆಚ್ಚಿಸುವ ಕುರಿತು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪಿಎಚ್.ಡಿ ಮಹಾಪ್ರಬಂಧ ಮಂಡನೆಯ ಶುಲ್ಕ 6500/- ಮತ್ತು ಮೌಖಿಕ ಪರೀಕ್ಷಾ ಶುಲ್ಕ ರೂ.375/-ಗಳ ಇದ್ದು ಅದನ್ನು ವಿಶ್ವವಿದ್ಯಾಲಯದ ನಿಯಮಾನುಸಾರ ಪ್ರತಿ ವರ್ಷ ಶೇ 10% ಹೆಚ್ಚಿಸಿದಾಗ ಮಹಾಪ್ರಬಂಧ ಮಂಡನೆಯ ಶುಲ್ಕವು ರೂ.7100/- ಮತ್ತು ಮೌಖಿಕ ಪರೀಕ್ಷಾ ಶುಲ್ಕ 420/-ಗಳು ಆಗುತಲಿದ್ದು ಸದರಿ ವಿಷಯವು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಪಿಎಚ್.ಡಿ ಮಹಾಪ್ರಬಂಧ ಮಂಡನೆಯ ಶುಲ್ಕ ಮತ್ತು ಮೌಖಿಕ ಪರೀಕ್ಷಾ ಶುಲ್ಕವನ್ನು ಹೆಚ್ಚಿಸಲು ಅನುಮೋದಿಸಲಾಯಿತು.**

**ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 05*

**ವಿಷಯ** : 2017-18ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ, ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೊಮಾ, ಸರ್ಟಿಫಿಕೇಟ್ ಹಾಗೂ ಬಿಪಿ.ಎಡ್ ಕೋರ್ಸುಗಳ ವಿದ್ಯಾರ್ಥಿನಿಯರ ಪರೀಕ್ಷಾ ಶುಲ್ಕದ ಬಗ್ಗೆ.

ಮೇಲಿನ ವಿಷಯಕ್ಕೆ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೊಮಾ, ಸರ್ಟಿಫಿಕೇಟ್ ಹಾಗೂ ಬಿಪಿ.ಎಡ್ ಕೋರ್ಸುಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದಿಂದ ಸಂದಾಯವಾಗುವ ಪರೀಕ್ಷಾ ಹಾಗೂ ಘಟಿಕೋತ್ಸವ ಪ್ರಮಾಣಪತ್ರ ಶುಲ್ಕವನ್ನು ಪ್ರತಿ ವರ್ಷದಂತೆ ಶೇ. 10%ರಷ್ಟು ಹೆಚ್ಚಿಸಿ ನಿಗದಿಪಡಿಸಿದ್ದು, ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-2017-18ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ, ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೊಮಾ, ಸರ್ಟಿಫಿಕೇಟ್ ಹಾಗೂ ಬಿಪಿ.ಎಡ್ ಕೋರ್ಸುಗಳ ವಿದ್ಯಾರ್ಥಿನಿಯರ ಪರೀಕ್ಷಾ ಶುಲ್ಕವನ್ನು ಹೆಚ್ಚಿಸಿ ನಿಗದಿಪಡಿಸಿರುವುದ್ದನ್ನು ಅನುಮೋದಿಸಲಾಯಿತು. ಹಾಗೂ ಸ್ನಾತಕ ಪದವಿಯ 6ನೇ ಸೆಮಿಸ್ಟರ್ ಹಾಗೂ ಸ್ನಾತಕೋತ್ತರ ಪದವಿಯ 4ನೇ ಸೆಮಿಸ್ಟರ್ ಪರೀಕ್ಷಾ ಶುಲ್ಕದ ಜೊತೆ ಘಟಿಕೋತ್ಸವ ಪದವಿಯ ಪ್ರಮಾಣಪತ್ರದ ಶುಲ್ಕವನ್ನು ಸಂದಾಯ ಮಾಡಲು ತೀರ್ಮಾನಿಸಲಾಯಿತು. ಶುಲ್ಕದ ವಿವರ ಈ ಕೆಳಗಿನಂತಿದೆ.**

| ಕ್ರ.ಸಂ | ವಿವರ | ಶುಲ್ಕ |
|---|---|---|
| **1.** | ಘಟಿಕೋತ್ಸವದ ಪ್ರಮಾಣ ಪತ್ರ ಪಡೆಯುವವರು (ಉಪಸ್ಥಿತ / ಅನುಉಪಸ್ಥಿತ) | **ರೂ.1000/-** |
| **2.** | ಜೂನ್ 2017ಕ್ಕಿಂತ ಮುಂಚೆ ತೇರ್ಗಡೆಯಾದವರಿಗೆ ಘಟಿಕೋತ್ಸವದ ಪ್ರಮಾಣ ಪತ್ರದ ಶುಲ್ಕದ ಜೊತೆಗೆ ದಂಡ | **ರೂ.66/- ಪ್ರತಿ ವರ್ಷಕ್ಕೆ** |
| **3.** | ಘಟಿಕೋತ್ಸವ ಮುಗಿದ ನಂತರ ಪ್ರಮಾಣ ಪತ್ರ ತುರ್ತಾಗಿ ಬೇಕಾದಲ್ಲಿ (ಘಟಿಕೋತ್ಸವ ಪ್ರಮಾಣ ಪತ್ರದ ಜೊತೆಗೆ ದಂಡ) | **ರೂ.2420** |

## *ಸಿಂಡಿಕೇಟ್ ಪುರವಣಿ ಸಂಖ್ಯೆ : 06*

ವಿಷಯ:- ಪ್ರಯಾಣ ಭತ್ಯೆ, ಆಸನ ಭತ್ಯೆ, ಸಂಭಾವನೆಯನ್ನು ನಿಗದಿಪಡಿಸುವ ಕುರಿತು.

1. ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್‌ನ ಸದಸ್ಯರು, ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್‌ನ ಸಭೆಗೆ ಹಾಜರಾದಾಗ ಕಿ.ಮೀ ರೂ.14/-ಯಂತೆ ಪ್ರಯಾಣ ಭತ್ಯೆ, 2000/- ಆಸನ ಭತ್ಯೆ ಹಾಗೂ ಸದರಿ ಸದಸ್ಯರು ಉಪ-ಸಮಿತಿಗಳಿಗೆ ಹಾಜರಾಗಿದ್ದಾಗ ಪ್ರಯಾಣ ಭತ್ಯೆ ಕಿ.ಮೀ ರೂ.14/-ಯಂತೆ ಆಸನ ಭತ್ಯೆ 1000/- ನಿಗದಿಪಡಿಸಲಾಗಿದೆ. ವಿಶ್ವವಿದ್ಯಾಲಯದಲ್ಲಿ ಜರುಗಲಿರುವ ಕಾರ್ಯಕ್ರಮಗಳಿಗೆ ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್‌ನ ಸದಸ್ಯರು ಅತಿಥಿಯಾಗಿ ಆಗಮಿಸಿದರೆ ಪ್ರಯಾಣ ಭತ್ಯೆ ಕಿ.ಮೀ ರೂ.14/-ಯಂತೆ ಕಾರ್ಯಕ್ರಮದ ಸಂಘಟಕರೇ ಭರಿಸುವುದು ಎಂದು ಸೂಚಿಸಲಾಗಿದೆ.
2. ವಿಶ್ವವಿದ್ಯಾಲಯದಲ್ಲಿ ಜರುಗಲಿರುವ ಅಂತರ್‌ರಾಷ್ಟ್ರೀಯ ಸೆಮಿನಾರ್/ಸಮ್ಮೇಳನಕ್ಕೆ/ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಯಾಗಿ, University Review ಸಮಿತಿ ಸದಸ್ಯರಾಗಿ ಆಗಮಿಸುವವರಿಗೆ Actual Air-fare(Economy Class)+Actual Local Convence ಅಥವಾ Ist AC Sleeper/ 2 ಟಾಯರ್ ಎಸಿ ಅಥವಾ ಪ್ರತಿ ಕಿ.ಮೀ ರೂ.14ರಂತೆ ಹಾಗೂ ಸಂಭಾವನೆ ರೂ.5000/- ನಿಗದಿಪಡಿಸಲಾಗಿದೆ.
3. ರಾಷ್ಟ್ರೀಯ ಸೆಮಿನಾರ್/ಸಮ್ಮೇಳನಕ್ಕೆ ಅತಿಥಿಯಾಗಿ, ಅಂತರ್‌ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿ, ಆಗಮಿಸುವವರಿಗೆ ಅಥವಾ ಪ್ರತಿ ಕಿ.ಮಿ. ರೂ.9/-ರಂತೆ ಅಥವಾ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಮಾನದ ಟಿಕೇಟು(Airfare) ಪಾವತಿಸಲು ಹಾಗೂ ಸಂಭಾವನೆ ರೂ.3000/- ನಿಗದಿಪಡಿಸಲಾಗಿದೆ.
4. ರಾಜ್ಯ ಸೆಮಿನಾರ್‌ಗಳಲ್ಲಿ ಮುಖ್ಯ ಅತಿಥಿ, ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವವರಿಗೆ 2 ಟಾಯರ್ ಎಸಿ ರೈಲು ಟಿಕೇಟ್ ಸಲ್ಲಿಸಿದಲ್ಲಿ ಅದರ ಮೊತ್ತ ಪಾವತಿಸಬೇಕು. ಅಥವಾ ಸ್ವಂತ ಕಾರ್ ತಂದರೆ ಪ್ರತಿ ಕಿ.ಮಿ. ರೂ.6/- ಬಾಡಿಗೆ, ಕಾರ್ ತಂದರೆ ಪ್ರತಿ ಕಿ.ಮಿ. ರೂ.9/-ರಂತೆ ಸಂಭಾವನೆ ರೂ.1000/- ನಿಗದಿಪಡಿಸಲಾಗಿದೆ.
5. ಬಿಓಎ ಸಮಿತಿ ಸಭೆಗೆ ಹಾಜರಾಗಿದ್ದ ಸದಸ್ಯರುಗಳಿಗೆ ಪ್ರತಿ ಕಿ.ಮಿ. ರೂ.14/-ರಂತೆ ಅಥವಾ 2 ಟಾಯರ್ ಎಸಿ ರೈಲು ಟಿಕೇಟ್ ಅಥವಾ ವಿಮಾನದ ಟಿಕೇಟು(Airfare) ಸಲ್ಲಿಸಿದ್ದಲ್ಲಿ ಅದನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪಾವತಿಸಲು ಹಾಗೂ ಸಂಭಾವನೆ ರೂ.3000/- ನಿಗದಿಪಡಿಸಲಾಗಿದೆ.
6. ಬಿಓಎಸ್ ಸಭೆಗಳಿಗೆ ಹಾಜರಾಗಿದ್ದ ಸದಸ್ಯರುಗಳಿಗೆ ಪ್ರಯಾಣ ಭತ್ಯೆ ಕಿ.ಮೀ ರೂ.3/-ಯಂತೆ ಅಥವಾ ಸದಸ್ಯರು 2 ಟಾಯರ್ ಎಸಿ ಬಿಲ್ಲ್ ನೀಡಿದಲ್ಲಿ, ಬಿಲ್ಲ್‌ನಲ್ಲಿ ಇರುವ ಮೊತ್ತವನ್ನು ಮತ್ತು ಡಿಎ 500/-ರಂತೆ ಪಾವತಿಸಲು ಆದೇಶಿಲಾಗಿದೆ.
7. ಬಿಓಇ ಸಭೆಗಳಿಗೆ ಹಾಜರಾಗಿದ್ದ ಸದಸ್ಯರುಗಳಿಗೆ ಪ್ರಯಾಣ ಭತ್ಯೆ ಕಿ.ಮೀ ರೂ.3/-ಯಂತೆ ಅಥವಾ ಸದಸ್ಯರು 2 ಟಾಯರ್ ಎಸಿ ಬಿಲ್ಲ್ ನೀಡಿದಲ್ಲಿ, ಬಿಲ್ಲ್‌ನಲ್ಲಿ ಇರುವ ಮೊತ್ತವನ್ನು ಮತ್ತು ಡಿಎ 500/-ರಂತೆ ಪಾವತಿಸಲು ಆದೇಶಿಲಾಗಿದೆ.
8. ಡಾಕ್ಟರೆಲ್ ಸಮಿತಿ ಸಭೆಗಳಿಗೆ ಹಾಜರಾಗಿದ್ದ ಸದಸ್ಯರುಗಳಿಗೆ ಪ್ರಯಾಣ ಭತ್ಯೆ ಕಿ.ಮೀ ರೂ.3/-ಯಂತೆ ಅಥವಾ ಸದಸ್ಯರು 2 ಟಾಯರ್ ಎಸಿ ಬಿಲ್ಲ್ ನೀಡಿದಲ್ಲಿ, ಬಿಲ್ಲ್‌ನಲ್ಲಿ ಇರುವ ಮೊತ್ತವನ್ನು ಮತ್ತು ಡಿಎ 500/-ರಂತೆ ಪಾವತಿಸಲು ಆದೇಶಿಲಾಗಿದೆ.
9. ಸಲಹಾ ಸಮಿತಿ ಸಭೆಗೆ ತಜ್ಞರು/ಪ್ರತಿನಿಧಿಗಳು/ಪ್ರಾಂಶುಪಾಲರು ಸದಸ್ಯರುಗಳಾಗಿ ಭಾಗವಹಿಸಿದರೆ ಪ್ರಯಾಣ ಭತ್ಯೆ ಕಿ.ಮೀ ರೂ.3/-ಯಂತೆ ಅಥವಾ ಸದಸ್ಯರು 2 ಟಾಯರ್ ಎಸಿ ಬಿಲ್ಲ್ ನೀಡಿದಲ್ಲಿ, ಬಿಲ್ಲ್‌ನಲ್ಲಿ ಇರುವ ಮೊತ್ತವನ್ನು ಪಾವತಿಸಲು ಹಾಗೂ ಸಂಭಾವನೆ ರೂ.500/-ನೀಡಲು ಆದೇಶಿಸಲಾಗಿದೆ.

ಈ ವಿಷಯವು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-ವಿಶ್ವವಿದ್ಯಾನಿಲಯದ ವಿವಿಧ ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ಹಾಗೂ ಕಾರ್ಯಕ್ರಮಗಳಿಗೆ ಆಗಮಿಸಲಿರುವ ಅತಿಥಿಗಳಿಗೆ ಪ್ರಯಾಣ ಭತ್ಯೆ, ಆಸನ ಭತ್ಯೆ, ಸಂಭಾವನೆಯನ್ನು ನಿಗದಿಪಡಿಸಲು ಅನುಮೋದಿಸಲಾಯಿತು.**

## ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಪುರವಣಿ ಸಂಖ್ಯೆ : 07*

ವಿಷಯ:- ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವದ ಶುಲ್ಕದ ವಿವರ ಮತ್ತು ಶೇ 10% ಪ್ರತಿಶತ ಹೆಚ್ಚಿಸಿದ ಶುಲ್ಕದ ವಿವರ ಈ ಕೆಳಗಿನಂತಿದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಪುರವಣಿ ಸಂಖ್ಯೆ:5ರಲ್ಲಿ ಚರ್ಚಿಸಿ ನಿರ್ಣಯಿಸಲಾಗಿದೆ.**

## ದಿನಾಂಕ:12-07-2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಪುರವಣಿ ಸಂಖ್ಯೆ : 08*

ವಿಷಯ:- ಬೋಧಕ ಹುದ್ದೆಗಳ ನೇಮಕಾತಿಗಾಗಿ BOA Committee ರಚನೆ ಮಾಡುವ ಕುರಿತು.

ಉಲ್ಲೇಖ:-1. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಬೋಧಕ ಹುದ್ದೆಗಳ ನೇಮಕಾತಿ ಮಾಡಬೇಕಾಗಿದ್ದು ವಿವರ ಈ ಕೆಳಗಿನಂತಿದೆ.

**ಮಂಜೂರಾದ ಹಾಗೂ ಖಾಲಿ ಇರುವ ಬೋಧಕ ಹುದ್ದೆಗಳ ವಿವರ**

| ಕ್ರಸಂ | ಹುದ್ದೆಗಳು | ಮಂಜೂರಾದ ಬೋಧಕ ಹುದ್ದೆಗಳ ಸಂಖ್ಯೆ ವರ್ಷವಾರು | | | | | ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ | ಖಾಲಿ ಇರುವ ಹುದೆಗಳ ಸಂಖ್ಯೆ | ಷರಾ |
|---|---|---|---|---|---|---|---|---|---|
| | | 10-5-2004 ರ ಒಟ್ಟು 121 ಅವುಗಳಲ್ಲಿ ಕೇವಲ 91 ಹುದ್ದೆಗಳಿಗೆ ಮಾತ್ರ ಅನುಮೋದನೆ ಮಾಡಲಾಗಿದೆ | 17-10-2008 ರ ಹಿಂದಿ ವಿಭಾಗಕ್ಕೆ | 15-11-2011 ರ ಆಹಾರ ಸಂಸ್ಕರಣ ವಿಭಾಗಕ್ಕೆ | 20-12-2011 ರ ವಾಣಿಜ್ಯ ವಿಭಾಗಕ್ಕೆ | ಒಟ್ಟು | | | 2005ನೇ ಸಾಲಿಗೆ **121** ಬೋಧಕ ಹುದ್ದೆಗಳು ಮಂಜೂರಾಗಿದ್ದು ಅವುಗಳಲ್ಲಿ School of Nursing M.Sc/B.Sc ವಿಭಾಗಕ್ಕೆ **30** ಬೋಧಕ ಹುದ್ದೆಗಳು ಮಂಜೂರಾಗಿ |
| 1 | ಪ್ರಾಧ್ಯಾಪಕರು | 15 | 1 | 1 | – | 17 | 4 | 13 ಇವುಗಳಲ್ಲಿ ಈಗಾಗಲೇ 1 ಹುದ್ದೆಯನ್ನು 371(ಜೆ) ಅಡಿಯಲ್ಲಿ ಭರ್ತಿಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದ್ದು ಕ್ರಮ ಜರುಗುತ್ತಿದೆ. **13-1=12** | |
| 2 | ಸಹ | 32 | 1 | 2 | 1 | 3 | 16 | 20 | |

| | | | | | | | | |
|---|---|---|---|---|---|---|---|---|
| | ಪ್ರಾಧ್ಯಾಪಕರು | | | | | 6 | | | ರುತ್ತವೆ. |
| 3 | ಸಹಾಯಕ ಪ್ರಾಧ್ಯಾಪಕರು | 44 | 2 | 3 | 1 | 50 | 30 | 20 | ಸದರಿ ವಿಭಾಗವು |
| | **ಒಟ್ಟು** | **91** | **4** | **6** | **2** | **103** | **50** | **52** | ಇಲ್ಲದೇ ಇರುವುದರಿಂದ ಸದರಿ 30 ಹುದ್ದೆಗಳ ನೇಮಕಾತಿ ಇದುವರೆಗೂ ಮಾಡಿರುವುದಿಲ್ಲ ಕೇವಲ 91 ಹುದ್ದೆಗಳಿಗಾಗಿ ಮಾತ್ರ ಅಧಿಸೂಚನೆ ಹೊರಡಿಸಲಾಗಿದೆ |

ಆದ್ದರಿಂದ **ಪ್ರಾಧ್ಯಾಪಕರು – 12, ಸಹ ಪ್ರಾಧ್ಯಾಪಕರು – 20, ಹಾಗೂ ಸಹಾಯಕ ಪ್ರಾಧ್ಯಾಪಕರು – 20** ಹೀಗೆ ಒಟ್ಟು **52** ಬೋಧಕ ಹುದ್ದೆಗಳ ನೇಮಕಾತಿ ಮಾಡಬೇಕಾಗಿರುವ ಹಿನ್ನೆಲೆಯಲ್ಲಿ BOA ಸಮಿತಿ ರಚಿಸಬೇಕಾಗಿರುತ್ತದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಿದೆ.

**ನಿರ್ಣಯ:– ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಪ್ರಾಧ್ಯಾಪಕರ/ಸಹ–ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು ನೇಮಕ ಪ್ರಕ್ರಿಯಗೆ ಅನುಮೋದನೆ ನೀಡಲಾಯಿತು.**

## ದಿನಾಂಕ:12–07–2017ರಂದು ಜರುಗಿದ 99ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಪುರವಣಿ ಸಂಖ್ಯೆ : 09*

**ವಿಷಯ:–** ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 2017–18ನೇ ಸಾಲಿನ ಆಂತರಿಕ ಆಯವ್ಯಯ ಅಂದಾಜು ಪತ್ರಿಕೆಯನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ವಿಶ್ವವಿದ್ಯಾನಿಲಯದ 2017–18ನೇ ಸಾಲಿನ ಆಂತರಿಕ ಆಯವ್ಯಯ ಅಂದಾಜು ಪತ್ರಿಕೆಯನ್ನು ಅನುಮೋದಿಸಲಾಯಿತು.**

**ಕುಲಸಚಿವರಾದ ಪ್ರೊ.ಕೆ.ಪಿ.ಶ್ರೀನಾಥ್ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ